**ದಿನಾಂಕಃ 02-12-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃ ಡಿಜಿಪಿ ರವರಿಂದ ಪ್ರತಿವಾದಿ ಪರವಾಗಿಃ**

5. ವಾದಿ ಕಂಪನಿಗೆ ಮಂಜೂರು ಮಾಡಿದ್ದ ಟೆಂಡರ್ ನ ಅಂತಿಮ ಬಿಲ್ಲಿನ ಹಣವನ್ನು ದಿನಾಂಕ 21.03.2017 ರಂದು ಪಾವತಿ ಮಾಡಲಾಗಿದೆ ಎಂದರೆ ಪಾವತಿಯಾಗಿದೆ ಆದರೆ ದಿನಾಂಕ ನೆನಪಿಲ್ಲ. ನಾವು ಮಾಡಿದ ಕೆಲಸದ ಬಗ್ಗೆ BOQ (Bill of quantity) ಆಗುತ್ತದೆ ಎಂದರೆ measurements ಆಗುತ್ತದೆ . ಆ ಬಗ್ಗೆ measurement book ನಿರ್ವಹಿಸುತ್ತೇವೆ. ನನ್ನ ಕಂಪನಿ ಮಾಡಿರುವ ಕೆಲಸದ ಅಳತೆ ಮಾಡಿ ಅದಕ್ಕೆ ಅನುಸಾರವಾಗಿ ಪ್ರತಿವಾದಿ ನನ್ನ ಕಂಪನಿಯ ಬಿಲ್ಲನ್ನು ಪಾವತಿ ಮಾಡಿದೆ ಎಂದರೆ ಸರಿಯಲ್ಲ. ವಾದಿ ಕಂಪನಿ ಕಾಮಗಾರಿಯನ್ನು ಪೂರ್ಣಗೊಳಿಸಿದ ಮೇಲೆ ವಾದಿ ಟೆಂಡರ್ ಸಮಯದಲ್ಲಿ ಪಾವತಿ ಮಾಡಿದ್ದ E.M.D. ಹಣವನ್ನು ವಾಪಸ್ಸು ಪಾವತಿ ಮಾಡಲು ಕೇಳಿದೆ ಮತು ಅದನ್ನು 1 ನೇ ಪ್ರತಿವಾದಿ ವಾದಿ ಕಂಪನಿಗೆ ಮರು ಪಾವತಿ ಮಾಡಿದೆ ಎಂದರೆ ನೆನಪಿಲ್ಲ. ದಾವೆಯನ್ನು ಕಾಲಪರಿಮಿತಿ ಅವಧಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

6. ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 80 ರಡಿಯಲ್ಲಿ ಪ್ರತಿವಾದಿಗಳಿಗೆ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ವಾದ ಪತ್ರಕ್ಕೆ ಪೂರಕವಾಗಿ ಪ್ರಮಾಣ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರ ವಾದಿ ಕಂಪನಿ ನಿಗದಿತ ವೇಳೆಯಲ್ಲಿ ಕಾಮಗಾರಿ ಮಾಡಿಲ್ಲ ಎಂದು ಹತ್ತಾರು ಬಾರಿ ವಾದಿಗೆ ನೋಟಿಸನ್ನು ಕೊಟ್ಟಿದೆ ಎಂದರೆ ಸರಿಯಲ್ಲ. ಯಾವುದೇ ದಂಡ ವಿಧಿಸದೇ ಕಾಮಗಾರಿ ನಿರ್ವಹಿಸಲು ಸಮಯವನ್ನು ಪ್ರತಿವಾದಿಗಳು ವಿಸ್ತರಿಸಿಕೊಟ್ಟಿದ್ದಾರೆ ಎಂದರೆ ಹೌದು . ಆದರೂ ನನ್ನ ಕಂಪನಿ ಶೇಕಡಾ 50 ಕ್ಕಿಂತ ಕಡಿಮೆ ಕಾಮಗಾರಿ ಕೆಲಸ ಮಾತ್ರ ಮಾಡಿದೆ ಎಂದರೆ ಸರಿಯಲ್ಲ. ದಿನಾಂಕ 31.03.2015, 26.05.2015, 10.08.2015, 25.08.2015, 24.09.2015 ಹಾಗೂ 20.01.2016 ರಂದು ನಾವೇ ಪತ್ರ ಬರೆದು ಅಲ್ಲಿಯವರೆಗೆ ಆಗಿರುವ ಕಾಮಗಾರಿಯನ್ನು ಅಲ್ಲಿಗೆ ಅಂತ್ಯಗೊಳಿಸಿ ಅಲ್ಲಿಯವರೆಗೆ ಆಗಿರುವ ಕಾಮಗಾರಿ ಕೆಲಸಕ್ಕೆ ಬಿಲ್ಲನ್ನು ಪಾವತಿ ಮಾಡಬೇಕು ಎಂದು ಕೇಳಿದ್ದೇವೆ ಎಂದರೆ ನಮ್ಮ ಕಂಪನಿಯ ಕಾರ್ಮಿಕರು ಕೆಲಸವಿಲ್ಲದೇ ಸುಮ್ಮನೆ ಇರುವಂತಾಗಿತ್ತು ಹಾಗೂ ವಾಹನಗಳು ಮತ್ತು

ಯಂತ್ರಗಳು ಕೆಲಸವಿಲ್ಲದೇ ಖಾಲಿ ಇದ್ದವು ಮತ್ತು ಪ್ರತಿವಾದಿಗಳಿಗೆ ಕಾಮಗಾರಿ ನಿರ್ವಹಿಸಬೇಕಾಗಿದ್ದ ಜಾಗವನ್ನು ಕಾಮಗಾರಿ ನಿರ್ವಹಿಸಲು ನಮ್ಮ ಸ್ವಾಧೀನಕ್ಕೆ ಕೊಡಲು ಸಾಧ್ಯವಾಗಲಿಲ್ಲ, ಹಡಗುಗಳು ನಿರಂತರವಾಗಿ ಬರುತ್ತಿದ್ದವು , ಅದಕ್ಕಾಗಿ ಆ ಮನವಿಗಳನ್ನು ನಾವು ಸಲ್ಲಿಸಿದ್ದೇವೆ . ಈಗ ನಾನು ಹೇಳಿದ್ದು ಸುಳ್ಳು ಇದೆ ಎಂದರೆ ಸರಿಯಲ್ಲ. ಅದು ಯಾವುದೂ ಕರಾರಿನ ಶರತ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಸರ್ಕಾರ ದಾವೆಯಲ್ಲಿ ಕೇಳಿರುವ ಹಣ ಪಾವತಿ ಮಾಡಲು ಬಾಧ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ. ನಾವು ರೂ. 18,79,794/- ಮೌಲ್ಯದ ಕಾಮಗಾರಿಯನ್ನು ಕೆಲಸದ ಅಳತೆ ಪ್ರಕಾರ ಮಾಡಿದ್ದೆವು ಮತ್ತು ಆ ಹಣವನ್ನು ಸರಿಯಾಗಿ ಸರ್ಕಾರ ಪಾವತಿ ಮಾಡಿದೆ ಎಂದರೆ ಕೆಲಸ ಮಾಡಿದ್ದದ್ದು ಹೆಚ್ಚು ಆಗಿತ್ತು ಆದರೆ ಬಿಲ್ಲು ಪಾವತಿ ಮಾಡಿರುವುದು ಕಡಿಮೆ ಇರುತ್ತದೆ . ಹೆಚ್ಚುವರಿ ಕೆಲಸ ವಾದಿ ಮಾಡಿದೆ ಎಂದು ಹೇಳಿದ್ದು ಆ ರೀತಿ ಹೆಚ್ಚುವರಿ ಕೆಲಸ ಮಾಡಲು ಸರ್ಕಾರ ಯಾವುದೇ ಆದೇಶ ಅಥವಾ ಅನುಮತಿ ನೀಡಿರಲಿಲ್ಲ ಎಂದರೆ ಸರಿಯಲ್ಲ . ಆ ಕೆಲಸ ಮಾಡದೇ ಕಾಮಗಾರಿಯ ಉಳಿದ ಕೆಲಸ ಮಾಡಲು ಸಾಧ್ಯವಿರಲಿಲ್ಲ ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ. ಈ ದಾವೆಯಲ್ಲಿ ಯಾವುದೇ ಪರಿಹಾರ ಪಡೆಯಲು ವಾದಿ ಅರ್ಹತೆ ಹೊಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದಾರೆ . ಆದ್ದರಿಂದ ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ